ಚಿತ್ರದುರ್ಗ, ಗುಲ್ಬರ್ಗಾದಲ್ಲಿ ಮಹಿಳೆಯರ ಮಾನಭಂಗ ಆದ ವಿಚಾರವನ್ನು ತಿಳಿಸಿದೆ. ಅದು ತಮ್ಮ ಗಮನಕ್ಕೆ ಬಂದಿಲ್ಲವೇ ಆ ಬಗ್ಗೆ ಯಾವಾಗ ಮಾಹಿತಿ ತರಿಸಿಕೊಳ್ಳುತ್ತೀರಿ ಮತ್ತು ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ತಾವು ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಆ ಬಗ್ಗೆ ನಾನು ಸರಿಯಾದ ಮಾಹಿತಿಯನ್ನು ತಮಗೆ ಕಳುಹಿಸುತ್ತೇವೆ ಅಥವಾ ಸದನದಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಿದರೆ ಉತ್ತರಿಸುತ್ತೇನೆ.

ಉಪಾಧ್ಯಕ್ಷೀಣಿಯವರು : ಮಾನ್ಯ ಪುಟ್ಟಸ್ವಾಮಿ ಗೌಡರ್, 125(249)ನೇ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ಸಮಯ ಕೇಳಿದ್ದಾರೆ. ಆದ್ದರಿಂದ ಅದನ್ನು ನಾನು ಮುಂದೆ ತೆಗೆದುಕೊಳ್ಳುತ್ತೇನೆ.

ಸಿ.ಡಿ.ಎಸ್. ನಾಲೆಯ ಮೇಲಿನ ಸೇತುವೆಗಳು

605 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕದೇವರಾಯಸಾಗರ ನಾಲೆಯಲ್ಲಿ ಎಷ್ಟು ಸೇತುವೆಗಳು ಹಾಳಾಗಿವೆ (ಬಿದ್ದು ಹೋಗಿವೆ)?

ಆ) ಅದನ್ನು ಯಾವಾಗ ಕಟ್ಟಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಒಂದು.

ಆ) 1993-94ನೇ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಶ್ರೀಮತಿ ದಮಯಂತಿ ಬೋರೇಗೌಡ : ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಚಿಕ್ಕದೇವರಾಯ ಸಾಗರ ನಾಲೆಯಲ್ಲಿ ಒಂದು ಸೇತುವೆ ಹಾಳಾಗಿದೆ ಎಂದು ಹೇಳಿದ್ದೀರಿ. ಆಕ್ಚುವಲ್ಲಾಗಿ ಒಂದು ಸೇತುವೆ ಬಿದ್ದೇ ಹೋಗಿದೆ. ಇನ್ನು ಮೂರು ಸೇತುವೆಗಳು ಹಾಳಾಗಿವೆ. ಇದರಿಂದಾಗಿ ರೈತರಿಗೆ ಬಹಳ ತೊಂದರೆಯಾಗಿರುವುದರಿಂದ ಕೂಡಲೆ ಆ ಸೇತುವೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದನ್ನೆಲ್ಲಾ ದುರಸ್ತಿ ಮಾಡತಕ್ಕ ಕಾರ್ಯಕ್ರಮವನ್ನು 1993-94ರ ಸಾಲಿನಲ್ಲಿ ಕೈಗೊಳ್ಳುತ್ತಿದ್ದೇವೆ ಮತ್ತು ಚಿಕ್ಕದೇವರಾಯನ ಅಣೆಕಟ್ಟು ಮತ್ತು ನಾಲೆಯ ಆಧುನೀಕರಣ ಕಾಮಗಾರಿಯನ್ನು ರಾಷ್ಟ್ರೀಯ ಜಲನಿರ್ವಹಣಾ ಯೋಜನೆಯ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ನಿಶ್ಚಯ ಮಾಡಿದ್ದೇವೆ. ಅನೇಕ ಶಿಥಿಲಗೊಂಡಿರುವ ಸೇತುವೆಗಳ ದುರಸ್ತಿ ಕಾರ್ಯವನ್ನೂ ಕೂಡ ಈ ಯೋಜನೆಯ ಅಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ : ಚಿಕ್ಕದೇವರಾಯಸಾಗರ ನಾಲೆಯ ಮೇಲಿರುವ ಸೇತುವೆ ದುರಸ್ತಿ ಆದೇರೀತಿ ನಾಲೆ ಪಕ್ಕದಲ್ಲಿ ಬರತಕ್ಕ ಸರ್ವಿಸ್ ರೋಡ್‌ನಲ್ಲಿ ಬರತಕ್ಕ ಸೇತುವೆಗಳು ರೈತರ ಉಪಯೋಗಕ್ಕೆ ಇದ್ದರೂ ಅವು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಬಂದು ದುರಸ್ತಿ ಕಾರ್ಯಕ್ರಮದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ನಾಲಾ ಸರ್ವಿಸ್ ರಸ್ತೆಗಳನ್ನು ಮತ್ತು ಇರಿಗೇಷನ್

ಟ್ರಾಕ್ ರಸ್ತೆಗಳನ್ನು ಜಿಲ್ಲಾ ಪರಿಷತ್ ವ್ಯಾಪ್ತಿಯಿಂದ ಹೊರತು ಪಡಿಸಿ ನೀರಾವರಿ ಇಲಾಖೆಗೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸರ್ಕಾರ ಪರಿಗಣಿಸುತ್ತದೆಯೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಸಲಹೆಗಳು ಬಹಳ ಯುಕ್ತವಾಗಿವೆ. ಆ ಬಗ್ಗೆ ನಾವು ಮುಂದೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

SMT. DAMAYANTHI BOREGOWDA : It is stated in answer that work is proposed to be taken up during 1993-94. I request that it should be taken up immediately.

ಶ್ರೀ ಎಂ. ವೀರಪ್ಪ ಮೊಯಿಲಿ : ಇನ್ನು ಎರಡೇ ತಿಂಗಳು ಇರುವುದು. ಎರಡು ತಿಂಗಳಲ್ಲಿ ಕೆಲಸ ಮಾಡಬೇಕೆಂದರೆ ಮಾಡುತ್ತೇವೆ.

ಶ್ರೀಮತಿ ದಮಯಂತಿ ಬೋರೆಗೌಡ : ಉದ್ದೇಶ ಎನ್ನುತ್ತೀರಿ ಪ್ರೊಪೋಸಲ್ ಎನ್ನುತ್ತೀರಿ.

SRI M. VEERAPPA MOILY : We will take up the work during 1993-94. 1993-94ರ ಆಯವ್ಯಯದಲ್ಲಿ ಅಥವಾ ಹಣಕಾಸಿನ ವರ್ಷದಲ್ಲಿ ಇದನ್ನು ತೆಗೆದುಕೊಳ್ಳುತ್ತೇನೆ. ಈ ಎರಡು ತಿಂಗಳಲ್ಲಿ ಮಾಡುವುದಕ್ಕೆ ಆಗುತ್ತದೆಯೇ ಇಲ್ಲವೇ ಎಂದು ನೋಡಬೇಕಾಗುತ್ತದೆ. ಒಟ್ಟಿನಲ್ಲಿ ಏಪ್ರಿಲ್ ನಂತರ ಈ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ತುಂಗಾ ಮೇಲ್ದಂಡೆ ಯೋಜನೆಗೆ ಒದಗಿಸಿದ ಹಣ

666 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ (ಅಪ್ಪರ್ ತುಂಗಾ) ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಲು ಆನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆಯೇ ಹಾಗಿದ್ದಲ್ಲಿ, ಈ ಯೋಜನೆಗೆ ಒದಗಿಸಿದ ಹಣವೆಷ್ಟು?

ಆ) ಸದರಿ ಯೋಜನೆಯ ಮಂಜುರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆಯೆ ಹಾಗಿದ್ದಲ್ಲಿ ಕೇಂದ್ರ ಸರ್ಕಾರದ ಕ್ರಮವೇನು?

ಇ) ಕೇಂದ್ರ ಸರ್ಕಾರದಿಂದ ವಾಪಸ್ಸು ಈ ಯೋಜನೆಯು ಮಂಜುರಾತಿಗಾಗಿ ಬರಲು ಕಾರಣವೇನು. ರಾಜ್ಯ ಸರ್ಕಾರವು ಈ ಯೋಜನೆಯ ಮಂಜೂರಾತಿಗಾಗಿ ಮಾಡಿದ ಪ್ರಯತ್ನಗಳೇನು. ಹಾಗಿದ್ದಲ್ಲಿ ಕಳೆದ ಒಂದು ವರ್ಷದಿಂದಲೂ ವಿಳಂಬವಾಗುತ್ತಿರಲು ಕಾರಣವೇನು ಹಾಗೂ ಯಾರು ಕಾರಣರು?

ಈ) ಈ ಯೋಜನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯಲು ಮತ್ತು ಆನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರ್ಪಡೆ ಮಾಡಲು ರಾಜ್ಯ ಸರ್ಕಾರ ಮಾಡಿದ ಮತ್ತು ಮಾಡಲಿರುವ ಕ್ರಮಗಳೇನು?

ಉ) 1992-93ನೇ ಸಾಲಿನಲ್ಲಿ ಈ ಯೋಜನೆಗೆ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಒದಗಿಸಲಾದ ಹಣವೆಷ್ಟು. ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು. ಮತ್ತು ಪೂರ್ಣಗೊಳಿಸಿ ನೀರಾವರಿ ಒದಗಿಸಲು ಸರ್ಕಾರ ಉದ್ದೇಶಿಸಿದೆಯೆ ಹಾಗೂ ಈ ಬಗ್ಗೆ ಸರ್ಕಾರದ ನೀತಿ ಮತ್ತು ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :